O.S. NO. 293/16 PW.1 Dated 13-02-2019.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು ನಿವೃತ್ತ ಶಿಕ್ಷಕ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ಈ ದಾವೆ ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿದ್ದೇನೆ. ವಾದ ಪತ್ರವನ್ನು ನಾನೇ ಖುದ್ದು ಪರಿಶೀಲಿಸಿದ್ದೇನೆ ಮತ್ತು ನನ್ನ ಮಾಹಿತಿಯಂತೆ ವಾದಪತ್ರವನ್ನು ತಯಾರಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ ನಾನು ಸರ್ವೆ ನಂ. 14 ಮತ್ತು ಸರ್ವೆ ನಂ. 30 ರ ಬಗ್ಗೆ ದಾವೆ ಸಲ್ಲಿಸಿದ್ದೇನೆ. ಸರ್ವೆ ನಂ. 14 ರಲ್ಲಿ 31 ಗುಂಟೆ ಜಮೀನು ಇದೆ. ಚಕ್ಕುಂಬದಿ ಪೂ-ಹೊಳೆ, ಪ-ಬೇರೆಯವರ ಗದ್ದೆ ಇದೆ ಅವರ ಹೆಸರು ಗೊತ್ತಿಲ್ಲ, ಉ-ಬೇರೆಯವರ ಗದ್ದೆ ಇದೆ ಅವರ ಹೆಸರು ಗೊತ್ತಿಲ್ಲ., ದ-ಹೊಸಳ್ಳಿಯವರ ಜಮೀನು ಬರುತ್ತದೆ ಹೆಸರು ಗೊತ್ತಿಲ್ಲ.

ಸರ್ವೆ ನಂ. 30 ರಲ್ಲಿ 31 ಗುಂಟೆ ಜಮೀನು ಇರಬಹುದು. ನನಗೆ ಜಮೀನು ಅಳತೆಗಳನ್ನು ನಿಖರವಾಗಿ ಹೇಳಲು ಬರುವುದಿಲ್ಲ, ಪತ್ರದಲ್ಲಿ ನಮೂದಿಸಿದೆ ಸರ್ವೆ ನಂ. 30 ಕ್ಕೆ ಚಕ್ಕುಬಂದಿ ಪೂ-ಕಟ್ಟೆ ಪ, ಉ ಹಾಗೂ ದ-ಪ್ರತಿವಾದಿ 1 ರವರ ಕಡೆಯವರ ಜಮೀನು, ನಾನು ಈಗ ಹೇಳಿದ ಚಕ್ಕುಂದಿಯನ್ನು ದಾವೆಯಲ್ಲಿ ಬರೆಸಿದ್ದೇನೆ. ದಾವಾ ಸ್ವತ್ತುಗಳನ್ನು 1996 ರಲ್ಲಿ ಖರೀದಿಸಿದ್ದೇನೆ, ದಿನಾಂಕ ಮರೆತ್ತಿದ್ದೇನೆ. ಪ್ರತಿವಾದಿ 1 ಮತ್ತು ಅವರ ಪತ್ನಿ ರುಕ್ಮಿಣಿ ನನಗೆ ದಾವಾ ಸ್ವತ್ತುಗಳನ್ನು ಮಾರಾಟಮಾಡಿದರು. ನಾನು 2 ನೇ ಪ್ರತಿವಾದಿಯಿಂದ ದಾವಾ ಸ್ವತ್ತನ್ನು ಖರೀದಿಮಾಡಿರುವುದಿಲ್ಲ. ಆದರೆ 2 ನೇ ಪ್ರತಿವಾದಿ ನನ್ನ ಬೆಳೆ ಪೈರನ್ನು ಕೊಯ್ದುಕೊಂಡು ಹೋಗಿರುತ್ತಾರೆ, ಆ ಕಾರಣವಾಗಿ ಅವರನ್ನು ದಾವೆಯಲ್ಲಿ ಸೇರಿಸಿದ್ದೇನೆ. 2 ನೇ ಪ್ರತಿವಾದಿಯ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡಲಿಲ್ಲ. ನೀವು ಹೇಳಿದಂತೆ 2 ನೇ ಪ್ರತಿವಾದಿ ನಿಮ್ಮ ಬೆಳೆಯನ್ನು ಕೊಯ್ದುಕೊಂಡು ಹೋಗಿಲ್ಲವೆಂದರೆ ಸರಿಯಲ್ಲ. ನಾನು ದಾವಾಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ಪಹಣಿ, ಆರ್ ಆರ್ 5 ಮತ್ತು 6, ಖಾತೆ ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

ನೀವು ದಾವಾ ಸ್ವತ್ತುಗಳನ್ನು ಖರೀದಿಸಿದ್ದರು ಸಹ, ದಾವಾ ಸ್ವತ್ತುಗಳ ಸ್ವಾಧೀನ 1 ನೇ ಪ್ರತಿವಾದಿಯಲ್ಲಿಯೇ ಇದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳನ್ನು ಖರೀದಿಸುವ ಮುಂಚೆ 1 ನೇ ಪ್ರತಿವಾದಿಯ ಕುಟುಂಬದ ಬಗ್ಗೆ ವಿಚಾರಿಸಲಿಲ್ಲ, ಅವರಿಗೆ ಎಷ್ಟು ಜನ ಸಹೋದರರಿದ್ದಾರೆ ಎಂದು ವಿಚಾರಿಸಲಿಲ್ಲ. ಪ್ರತಿವಾದಿಯರು ನನ್ನ ಸ್ವಾಧೀನಕ್ಕೆ ತೊಂದರೆ ನೀಡಿದರು ಎಂದು ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಲಿಲ್ಲ. ನೀವು ಹೇಳಿದಂತೆ ದಾವಾ ಸ್ವತ್ತುಗಳಲ್ಲಿ ನೀವು ಸ್ವಾಧೀನದಲ್ಲಿಲ್ಲದೆ ಇದ್ದರು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಿಂದಿನಿಂದಲೂ ಹಾಗೂ ಈಗಲು ಸಹ 1 ನೇ ಪ್ರತಿವಾದಿಯ ಕುಟುಬಂದಲ್ಲಿ ದಾವಾ ಸ್ವತ್ತುಗಳು ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತುಗಳನ್ನು ಖರೀದಿಸಿದಾಗಿನಿಂದ, ಈ ದಾವೆ ಸಲ್ಲಿಸುವ ತನಕ ಪ್ರತಿವಾದಿಯರಿಗೆ ಸ್ವಾಧೀನ ಕೇಳಿದ್ದು ಅವರು ನೀಡದ ಕಾರಣ ಅನಿವಾರ್ಯವಾಗಿ ಈ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವೊತ್ತು ನಿಮಗೆ ತೊಂದರೆ

ನೀಡಿಲ್ಲ, ನೀವು ಸ್ವಾಧೀನದಲ್ಲಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀಮಗೆ ಆಗಿರುವ ಕ್ರಯಪತ್ರ Nominal Sale Deed ಅವುಗಳು Absolute sale deed ಅಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳು ನಾಮಕಾವಸ್ಥೆ ಪತ್ರಗಳಾಗಿದ್ದು ನಿಮಗೆ ತೊಂದರೆ ನೀಡುವ ಸಂದರ್ಭ ಇರುವುದಿಲ್ಲವೆಂದರೆ ಸರಿಯಲ್ಲ ನಾಮಕಾವಸ್ಥೆ ಕ್ರಯಪತ್ರದಂತೆ ನೀವು ರೆವಿನ್ಯೂ ದಾಖಲಾತಿಗಳನ್ನು ಬದಲಾಯಿಕೊಂಡಿದ್ದೀರಿ ಆದರೆ ಸ್ವಾಧೀನದಲ್ಲಿಲ್ಲವೆಂದರೆ ಸರಿಯಲ್ಲ. ನಿಮಗೆ ಪ್ರತಿವಾದಿ 1 ಮಾರಾಟಮಾಡಿಲ್ಲದ ಕಾರಣ ಅತಿಕ್ರಮಪ್ರವೇಶ ಮಾಡುವ ಸಂದರ್ಭವು ಬರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯರು ಕೊಲೆಬೆದರಿಕೆ ಹಾಕಿದ್ದರು ಆ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿಲ್ಲ. ನೀವು ಹೇಳಿದಂತೆ ನಿಮ್ಮ ಸ್ವಂತ ದುಡಿಮೆಯಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿದ್ದೇನೆ ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನೀವು ಹೇಳಿದಂತೆ ದಾವಾ ಸ್ವತ್ತುಗಳಲ್ಲಿ ಶುಂಠಿ ಮತ್ತು ಭತ್ತವನ್ನು ನೀವು ಬೆಳೆದಿಲ್ಲ ಎಂದರೆ ಸರಿಯಲ್ಲ. ಸದರಿ ಬೆಳೆಯನ್ನು 1 ನೇ ಪ್ರತಿವಾದಿ ಬೆಳೆದಿದ್ದು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನೀವು ಯಾವೊತ್ತು ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಇರಲಿಲ್ಲ, ಈಗಲು ಇಲ್ಲ ಎಂದರೆ ಸರಿಯಲ್ಲ.

1996ರ ನಂತರ ನಾನು ರೆವಿನ್ಯೂ ದಾಖಲಾತಿಗಳನ್ನು ಬದಲಾಯಿ ಕೊಂಡೆನು. ಈಗ 10 ವರ್ಷಗಳ ಹಿಂದೆ ರೆವಿನ್ಯೂ ದಾಖಲಾತಿಗಳು ನನ್ನ ಹೆಸರಿಗೆ ಬದಲಾಗಿವೆ. ನಾನು ಕಛೇರಿಗೆ ಅರ್ಜಿ ಕೊಟ್ಟಿದ್ದು ಆ ನಂತರ ದಾಖಲಾತಿಗಳು ಬದಲಾಗಿವೆ. ಕ್ರಯಪತ್ರಗಳು ನಾಮಕಾವಸ್ತೆ ದಾಖಲಾತಿಗಳಾದ ಕಾರಣ ನೀವು ತಕ್ಷಣ ಖಾತೆಯನ್ನು ಬದಲಾಯಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ರೆವಿನ್ಯೂ ದಾಖಲಾತಿಗಳು ಬದಲಾದ ನಂತರ ಈಚೆಗೆ ನೀವು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ನಿಜವಾಗಲು ಖರೀದಿಸಿದ್ದರೆ ಆಗಲೆ ದಾವೆ ಸಲ್ಲಿಸುತ್ತಿದ್ದೀರಿ ಸದರಿ ಕ್ರಯಪತ್ರ ನಿಜವಾದ ಕ್ರಯಪತ್ರವಾಗದ ಕಾರಣ ಈಗ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ ದಾವೆ ಸಲ್ಲಿಸಿ ಆದೇಶ ಪಡೆದು ಸ್ವಾಧೀನ ಹೊಂದಲು ಪ್ರಯತ್ನಿಸುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ವ್ಯಾಜ್ಯ ಕಾರಣ ಸಲ್ಲಿಸಿ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 2016 ರಲ್ಲಿ ನೀವೆ ಪ್ರತಿವಾದಿ 1ರವರ ಬಳಿ ಬಂದು ಭತ್ತ ಮತ್ತು ಶುಂಠಿ ಬೆಳೆಯನ್ನು ಕೊಡಿ ಎಂದು ಕೇಳಿ ಅವರಿಗೆ ನೀವೆ ತೊಂದರೆ ನೀಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮಲ್ಲಿ ಸ್ವಾಧೀನವಿಲ್ಲದ ಕಾರಣ ದಾವೆಯಲ್ಲಿ ಕೋರಿರುವಂತೆ ಪರಿಹಾರ ಕೋರಲು ಅರ್ಹರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಕುಟುಂಬದಲ್ಲಿ ಎಷ್ಟು ಜನ ಸದಸ್ಯರಿದ್ದಾರೆ, ಅವರಲ್ಲಿ ವಿಭಾಗವಾಗಿದೆಯೋ ಇಲ್ಲವೋ ಎಂದು ನಾನು ವಿಚಾರಿಸಿರುವುದಿಲ್ಲ.

1 ನೇ ಪ್ರತಿವಾದಿ ನಿಮ್ಮ ಬಳಿ ಕೈಸಾಲ ಮಾಡಿದ್ದು, ಸದರಿ ಸಾಲ ತಿರುವಳಿ ಮಾಡಲು ವಿಳಂಭವಾದ ಕಾರಣ ಅದರ ಭದ್ರತೆಗಾಗಿ ಕ್ರಯಪತ್ರಗಳನ್ನು ನಾಮಕಾವಸ್ತೆಯಾಗಿ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ ರುಕ್ಮಿಣಿಯವರಿಗೆ ಹೇಗೆ ದಾವಾ ಸ್ವತ್ತು ಬಂತು ಎಂದು ನನಗೆ ಗೊತ್ತಿಲ್ಲ, ಅವರ ಹೆಸರಿನಲ್ಲಿ ಖಾತೆ ಇತ್ತು. 1ನೇ ಪ್ರತಿವಾದಿ ಸಾಲ ತೀರಿಸಿ ಕ್ರಯಪತ್ರಗಳನ್ನು ವಾಪಾಸು ತಮ್ಮ ಹೆಸರಿಗೆ ಬರೆದುಕೊಡುವಂತೆ ಕೇಳಿದ್ದರು ಸಹ ನೀವು ಬರೆದುಕೊಡಲು ಮನಸ್ಸು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ 1 ರವರ ಬಳಿ ಸ್ವಾಧೀನವಿರುವ ಕಾರಣ ನಿಮ್ಮ ವಿರುದ್ಧ ಕೌಂಟರ್ ಕ್ಲೈಮ್

ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ ಮತ್ತು ಸ್ವಾಧೀನ 1 ನೇ ಪ್ರತಿವಾದಿಯ ಕಡೆ ಇರುವ ಕಾರಣ ಕೌಂಟರ್ ಕ್ಲೈಮ್ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಿಮಗೆ ಆಗಿರುವ ಕ್ರಯಪತ್ರಗಳು ನಾಮಕಾವಸ್ಥೆ ದಾಖಲಾತಿಗಳಾದ ಕಾರಣ 1 ನೇ ಪ್ರತಿವಾದಿಯು ಹಕ್ಕುದಾರರು ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮಗೆ ಯಾವೋತ್ತು ತೊಂದರೆ ನೀಡುವ ಸಂದರ್ಭ ಬಂದಿರುವುದಿಲ್ಲ, ಏಕೆಂದರೆ ನೀವು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಿಪಿ-3, ಒಂದು ಸ್ವತ್ತಿಗೆ ಸಂಬಂಧಿಸಿದ್ದು ಮಾತ್ರ ಎಂದರೆ ಸರಿಯಲ್ಲ ನಿಪಿ-4 ರಿಂದ 9 ನ್ನು ಯಾರು ಬೇಕಾದರು ತೆಗೆದು ಹಾಜರುಪಡಿಸಬಹುದು ಎಂದರೆ ಸರಿಯಲ್ಲ. ನಿಮ್ಮ ವಾದಪತ್ರ ಹಾಗೂ ಮುಖ್ಯವಿಚಾರಣೆಯಲ್ಲಿ ಬರೆಸಿರುವ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಾಸನದ ಮುತ್ತತ್ತಿ ರಾಜಣ್ಣರವರ ಜೊತೆ ಸೇರಿ ನೀವು ಸುಳ್ಳು ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಮುತ್ತತ್ತಿ ರಾಜಣ್ಣ ಮತ್ತು ದಾವಾ ಸ್ವತ್ತಿನ ಬಗ್ಗೆ ಕರಾರುಪತ್ರ ವಾಗಿತ್ತು ಅದನ್ನು ನಿಮ್ಮ ಹೆಸರಿಗೆ ಮಾಡಿಸಲಾಗಿದೆ ಎಂದರೆ ಸರಿಯಲ್ಲ

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು